# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಜನವರಿ 2020**, ಬೆಂಗಳೂರು, ಸಂಪುಟ 5, ಸಂಚಿಕೆ 9, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 January 2020**, Bangaluru, Vol. 5, No.9, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription :Annual Rs. 30; Life : Rs. 500/-
Published by: Karnataka Vipassana Prachara Samiti Trust.


**ಧಮ್ಮ ಪದಗಳು**

ನ ಜಚ್ಚಾ ವಸಲೋ ಹೋತಿ; ನ ಜಚ್ಚಾ ಹೋತಿ ಬ್ರಾಹ್ಮಣೋ;
ಕಮ್ಮುನೋ ವಸಲೋ ಹೋತಿ, ಕಮ್ಮುನೋ ಹೋತಿ ಬ್ರಾಹ್ಮಣೋ.

ಹುಟ್ಟಿನಿಂದ ಒಬ್ಬ ವ್ಯಕ್ತಿಯು ಕೀಳುಜಾತಿಯವನಾಗುವುದಿಲ್ಲ;
ಹುಟ್ಟಿನಿಂದ ಒಬ್ಬ ವ್ಯಕ್ತಿಯು ಬ್ರಾಹ್ಮಣವಾಗುವುದಿಲ್ಲ.
ತನ್ನ ಕ್ರಿಯೆಯಿಂದ ಒಬ್ಬ ವ್ಯಕ್ತಿಯು ಕೀಳು ಜಾತಿಯವನಾಗುತ್ತಾನೆ,
ತನ್ನ ಕ್ರಿಯೆಯಿಂದ ಒಬ್ಬ ವ್ಯಕ್ತಿಯು ಬ್ರಾಹ್ಮಣನಾಗುತ್ತಾನೆ.

**ಸುತ್ತ ನಿಪಾತಪಾಲಿ – 142, ವಸಲಸುತ್ತ**

## ಧಮ್ಮವು ಮರಳಿದ ಮತ್ತು ಹರಡಿದ ಸುವರ್ಣ ಮಹೋತ್ಸವ ವರ್ಷ : ನಮ್ಮ ಆಚಾರ್ಯರಾದ ಶ್ರೀ ಗೋಯಂಕಾಜಿಯವರಿಗೆ ಕೃತಜ್ಞತೆಗಳನ್ನು ಅರ್ಪಿಸಲು ಒಂದು ಅದ್ಭುತ ಸಂದರ್ಭ.

**(ನವೆಂಬರ್, 2018ರ ಇಂಗ್ಲಿಷ್ ವಿಪಶ್ಯನ ವಾರ್ತಾ ಪತ್ರದಿಂದ ಅನುವಾದಿಸಲಾಗಿದೆ.)**

ವಿಪಶ್ಯನ ಧ್ಯಾನವು ಭಾರತಕ್ಕೆ ಮರಳಿದ ಮತ್ತು ವಿಶ್ವದಾದ್ಯಂತ ಹರಡಿದ ಐವತ್ತನೇ ವರ್ಷದ ಸುವರ್ಣ ಮಹೋತ್ಸವವನ್ನು, ಜುಲೈ 3, 2018 ರಿಂದ ಜುಲೈ 2, 2019ರ ವರ್ಷ ಪೂರ್ತಿ ಆಚರಿಸಲಾಯಿತು. ಇದು ಗೋಯಂಕಾಜಿಯವರ ಎಲ್ಲಾ ವಿದ್ಯಾರ್ಥಿಗಳ ಪ್ರತಿನಿತ್ಯದ ಅಭ್ಯಾಸವನ್ನು ಬಲಗೊಳಿಸುವುದರಲ್ಲಿ ಸಹಕಾರಿಯಾಗುತ್ತದೆ ಎಂದು ಆಶಿಸಲಾಗಿದೆ. ಈ ಉದ್ದೇಶ ಸಾಧನೆಗಾಗಿ ಗ್ಲೋಬಲ್ ವಿಪಶ್ಯನ ಪಗೋಡಾದಲ್ಲಿ ವರ್ಷ ಪೂರ್ತಿ, ಪ್ರತಿ ದಿನ ಒಂದು ದಿನದ ಶಿಬಿರ ನಡೆಸಲಾಯಿತು. ಹಳೆಯ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದರು. ಇತರೆ ಸ್ಥಳಗಳಲ್ಲೂ ಧ್ಯಾನ ಸಾಧಕರು ಈ ಸುವರ್ಣ ಮಹೋತ್ಸವದ ಸಂಭ್ರಮಾಚರಣೆ ಮಾಡಿದರು. ಇದು ನಾವು ಪೂಜ್ಯ ಗೋಯಂಕಾಜಿಯವರನ್ನು ಸ್ಮರಿಸುವ ಮತ್ತು ಅವರಿಗೆ ನಿಜವಾದ ಕೃತಜ್ಞತೆ ತೋರಿಸುವ ರೀತಿ. (ಕೆಲವು ಮಾರ್ಪಾಡು ಮಾಡಲಾಗಿದೆ.)

ಗೋಯಂಕಾಜಿಯವರ ಜೀವನ ಚಿತ್ರಣವನ್ನು, ಅವರ ಆತ್ಮ ಕಥನವನ್ನು ಆಧರಿಸಿ ಅವರದೇ ಮಾತುಗಳಲ್ಲಿ 'ವಿಪಶ್ಯನ ವಾರ್ತೆ'ಯಲ್ಲಿ ಕೊಡುತ್ತಿದ್ದೇವೆ.
(ಇದು ಮೂರನೆಯ ಕಂತು, ಮೊದಲೆರಡು ಕಂತುಗಳನ್ನು ಅಕ್ಟೋಬರ್ ಮತ್ತು ನವೆಂಬರ್ 2018ರ 'ವಿಪಶ್ಯನ ವಾರ್ತೆ'ಯಲ್ಲಿ ಕೊಡಲಾಗಿದೆ.)

### ಶ್ರೀ ಕೃಷ್ಣ ಪರಮಾತ್ಮನಲ್ಲಿ ಗಾಢವಾದ ಶ್ರದ್ಧೆ

ಮುಂದುವರಿದದ್ದು .............

ವ್ಯಾಪಾರ ಕ್ಷೇತ್ರದಲ್ಲಿ ನಾನು 'ಮಾರ್ವಾರಿ ಛೇಂಬರ್ ಆಫ್ ಕಾಮರ್ಸ್'ನ ಮುಖ್ಯಸ್ಥನಾದೆ. ನಂತರ ಬರ್ಮಾ ದೇಶದ ಪೌರತ್ವ ಪಡೆದ ಮೇಲೆ 'ರಂಗೂನ್ ಛೇಂಬರ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರೀಸ್'ನ ಮುಖ್ಯಸ್ಥನಾದೆ. **ಯು ನೂ** ಸರ್ಕಾರದ ಅವಧಿಯಲ್ಲಿ **ಯು ಆ್ಯಂಗ್** ರವರ ವಾಣಿಜ್ಯ ಮಂತ್ರಾಲಯದ ಸಲಹಾ ಸಮಿತಿಯ ಸದಸ್ಯನೂ ಆಗಿದ್ದೆ.

ಕುಟುಂಬದ ವ್ಯಾಪಾರವನ್ನು ವಿಸ್ತರಿಸಿದೆ. ಅನೇಕ ಹೊಸ ಉದ್ಯಮಗಳನ್ನು ಸ್ಥಾಪಿಸಿ ಅದ್ಭುತವಾದ ಯಶಸ್ಸು ಗಳಿಸಿದೆ. ಅಧಿಕಾರಿಗಳ ಜೊತೆ ಅತ್ಯುತ್ತಮ ಸಂಬಂಧ ಹೊಂದಿದ್ದರಿಂದ, ಸರ್ಕಾರದ ನಿಯೋಗಗಳೊಡನೆ ಎರಡು ಬಾರಿ ನನ್ನನ್ನು ವಿದೇಶಗಳಿಗೆ ಕಳುಹಿಸಿದರು ಮತ್ತು ನಾವು ಅನಿರೀಕ್ಷಿತವಾದ ಉತ್ತಮ ಫಲಿತಾಂಶವನ್ನೂ ಸಾಧಿಸಿದೆವು.

ಶ್ರೀಕೃಷ್ಣ ಪರಮಾತ್ಮನ ಮೇಲೆ ನನಗಿದ್ದ ಭಕ್ತಿಯೇ ಈ ಅಸಾಧಾರಣ ಯಶಸ್ಸಿಗೆ ಕಾರಣ ಎಂದು ಭಾವಿಸಿದೆ. ನಾನು ಚಿಕ್ಕವನಾಗಿದ್ದಾಗ ನನ್ನ ಜೇಬಿನಲ್ಲಿಟ್ಟುಕೊಂಡಿದ್ದ ಶ್ರೀಕೃಷ್ಣನ ಚಿತ್ರವು, ನಾನು ವಿದೇಶಗಳಿಗೆ ಪ್ರಯಾಣಿಸಿದಾಗಲೂ ನನ್ನ ಜೇಬಿನಲ್ಲಿರುತ್ತಿತ್ತು. ಭಾರತದ ಗೋರಖ್‌ಪುರದ ಹೆಸರಾಂತ ಪ್ರಕಾಶನ ಸಂಸ್ಥೆಯಾದ 'ಗೀತಾ ಪ್ರೆಸ್'ನ ಹೃದಯ ಕರಗಿಸುವ ಭಕ್ತಿಯ, ಆಧ್ಯಾತ್ಮಿಕ ಪುಸ್ತಕಗಳ ಗಾಢ ಪ್ರಭಾವಕ್ಕೊಳಗಾದೆ.

ಪ್ರತಿದಿನ ಅರ್ಧಗಂಟೆಯ ಕಾಲ ಈ ಚಿತ್ರದ ಮುಂದೆ ಕುಳಿತು ಕಣ್ಣೀರಿಡುತ್ತಾ ಭಕ್ತಿ ಗೀತೆಗಳನ್ನು ಹಾಡುತ್ತಿದ್ದೆ ಮತ್ತು ದಿನವಿಡೀ ಭಕ್ತಿಯ ಆನಂದದಲ್ಲಿ ಮುಳುಗಿರುತ್ತಿದ್ದೆ. ನನ್ನ ಕೃಷ್ಣನಿಗೆ ನನ್ನನ್ನು ಸಮರ್ಪಿಸಿಕೊಂಡದ್ದು ಜೀವನದ ಪ್ರತಿ ಹೆಜ್ಜೆಯಲ್ಲೂ ನನಗೆ ಸಹಾಯ ಮಾಡುತ್ತಿದೆ ಎಂಬ ನಂಬಿಕೆಯು ದಿನಕಳೆದಂತೆ ಗಟ್ಟಿಯಾಗಿ ಬೆಳೆಯಿತು.

ಮೂರರಿಂದ ಹತ್ತನೆಯ ತರಗತಿಯವರೆಗೆ ನಾನು ಖಲ್ಸಾ (ಸಿಖ್) ಶಾಲೆಯಲ್ಲಿ ಓದಿದೆ. ಸಿಖ್ಖರ ಪವಿತ್ರ ಸ್ತೋತ್ರಗಳು (ಗುರು ವಾಣಿ) ನನ್ನ ಮೇಲೆ ಪ್ರಭಾವ ಬೀರಿದವು. ಆದರೂ ಅವುಗಳಿಗಿಂತ ಹೆಚ್ಚು ನನ್ನ ಮೇಲೆ ಪ್ರಭಾವ ಬೀರಿದವುಗಳು ಆರ್ಯ ಸಮಾಜದ (ಹಿಂದು ಸುಧಾರಣಾ ಚಳುವಳಿ) ವಿಚಾರಗಳು. ಆರ್ಯ ಸಮಾಜದ ಕೇಂದ್ರ ಕಛೇರಿಯು ನನ್ನ ಮನೆಯ ಸಮೀಪದಲ್ಲೇ ಇತ್ತು. ರೂಪವಿಲ್ಲದ, ಅಮೂರ್ತ ದೇವರನ್ನು ಪೂಜಿಸುವ ಅವರ ಆಲೋಚನೆ ನನ್ನ ಮೇಲೆ ಪ್ರಭಾವ ಬೀರಲಿಲ್ಲ. ಏಕೆಂದರೆ, ಆಕಾರ ಮತ್ತು ಗುಣಲಕ್ಷಣಗಳ ಪ್ರಭಾವಗಳುಳ್ಳ ದೇವರನ್ನು ನಾನು ಪೂಜಿಸುತ್ತಿದ್ದೆ. ಆದರೆ ಅವರ ಇತರೆ ನಂಬಿಕೆಗಳು ನನ್ನ ಮೇಲೆ ದೊಡ್ಡ ಪರಿಣಾಮ ಉಂಟುಮಾಡಿದವು.

ಸಮಾಜದಲ್ಲಿ ಪ್ರಚಲಿತವಿದ್ದ ಲೆಕ್ಕವಿಲ್ಲದಷ್ಟು ಅನಿಷ್ಟ ಪದ್ಧತಿಗಳನ್ನು ತೆಗೆದುಹಾಕುವ ಹಂಬಲ ಆಗಿನ ಕಾಲದಲ್ಲಿ ಪ್ರಬಲವಾಗಿತ್ತು. ನನ್ನನ್ನು ಹೆಚ್ಚು ಬಾಧಿಸಿದ್ದೆಂದರೆ, ಅವನ ಅಥವಾ ಅವಳ ಆಕಸ್ಮಿಕ ಹುಟ್ಟಿನ ಕಾರಣದಿಂದಲೇ ಉಚ್ಚ ಅಥವಾ ನೀಚ ಎಂದು ಪರಿಗಣಿಸುತ್ತಿದ್ದದ್ದು. ಕೇವಲ ಹುಚ್ಚು ಅವೇಶದಿಂದ ಕೆಳಜಾತಿಯಲ್ಲಿ ಹುಟ್ಟಿದ ಕೆಲವರನ್ನು ಆರ್ಯ ಸಮಾಜಕ್ಕೆ ಕರೆದುಕೊಂಡು ಹೋಗಿ, ಅವರಿಗೆ ಜನಿವಾರ ಹಾಕುವ ಕರ್ಮಾಚರಣೆ ಮಾಡಿಸಿದೆ ಮತ್ತು ಅವರನ್ನು ಮೇಲ್ಜಾತಿಯವರೆಂದು ಘೋಷಿಸಿದೆ. ಆದರೆ ಅದರಲ್ಲಿ ಹುಮ್ಮಸ್ಸು ಇತ್ತೇ ಹೊರತು ವಿವೇಕ ಮತ್ತು ಅನುಭವ ಇರಲಿಲ್ಲ. ಅದು ಸಂಪೂರ್ಣ ವಿಫಲವಾಯಿತು. ಸಂಪ್ರದಾಯದಿಂದ ಬಂಧಿಸಲ್ಪಟ್ಟ ಪುರಾತನ ಸಾಮಾಜಿಕ ಪದ್ಧತಿಗಳು ಆಳವಾಗಿ ಬೇರೂರಿವೆ ಮತ್ತು ಇಂತಹ ಉಲ್ಲಂಘನೆಗಳನ್ನು ಅವು ಅನುಮತಿಸುವುದಿಲ್ಲ. ಈ ನತದೃಷ್ಟರು ತಮ್ಮ ಹಿಂದಿನ ಸಾಮಾಜಿಕ ಶ್ರೇಣಿಗೇ ಹಿಂದಿರುಗಿದರು. ಎದೆಗುಂದದೆ, ನಾನು ಪುನ: ಪ್ರಯತ್ನಿಸಿದೆ. ಆದರೆ ಈ ಕಂದಾಚಾರಗಳನ್ನು ಮುರಿಯುವುದು ಬಹಳ ಕಷ್ಟ ಎಂಬುದನ್ನು ಕಂಡುಕೊಂಡೆ.

ಬಹಳ ಎಳೆಯ ಹೆಣ್ಣುಮಕ್ಕಳನ್ನು ವಯಸ್ಸಾದ ಗಂಡಸರಿಗೆ ಕೊಟ್ಟು ಬಲವಂತವಾಗಿ ಮಾಡುವ ಮದುವೆಯ ವಿರುದ್ಧವಾಗಿಯೂ ನಾನು ನನ್ನ ತಾರುಣ್ಯದಲ್ಲಿ, ಧ್ವನಿ ಎತ್ತಿದ್ದೆ. ಸಮಾಜ ಸುಧಾರಣೆಯ ನನ್ನ ಇನ್ನೊಂದು ಪ್ರಯತ್ನವೂ ಆತಂಕಗೊಳಿಸುವಂತಹ ವಿಫಲತೆಯಲ್ಲಿ ಕೊನೆಗೊಂಡಿತು. ನನ್ನ ಸ್ನೇಹಿತನ ಹೆಂಡತಿ ತೀರಿಕೊಂಡಿದ್ದಳು ಮತ್ತು ಸುಮಾರು ಅದೇ ಸಮಯಕ್ಕೆ, ಮದುವೆಯಾದ ಕೆಲವೇ ದಿನಗಳಲ್ಲಿ, ಎಳೆಯ ಹೆಣ್ಣುಮಗಳೊಬ್ಬಳು ವಿಧವೆಯಾದಳು. ನಮ್ಮಲ್ಲಿ ಕೆಲವರು ಒಟ್ಟಾಗಿ ಆ ಯುವ ವಿಧವೆಯನ್ನು ಮದುವೆಯಾಗುವಂತೆ ನಮ್ಮ ವಿಧುರ ಸ್ನೇಹಿತನಿಗೆ ಮನವರಿಕೆ ಮಾಡಿದೆವು. ನಮ್ಮಿಂದ ಪ್ರೇರಣೆಗೊಂಡು ಅವನು ಅಂತಿಮವಾಗಿ ಮದುವೆಗೆ ಒಪ್ಪಿದ. ಆದರೆ ಸಮುದಾಯವು ತೀವ್ರವಾಗಿ ವಿರೋಧಿಸಿತು. ದೊಡ್ಡ ಕೋಲಾಹಲವಾಯಿತು. ನನ್ನ ಸ್ನೇಹಿತನ ತಂದೆಯು ಇರ್ರವಡ್ಡಿ ನದಿಗೆ ಹಾರಿ ಸಾಯುವ ಬೆದರಿಕೆ ಹಾಕಿದರು. ಕೊಳೆತು ನಾರುವ ಸಾಮಾಜಿಕ ಸಂಕೋಲೆಗಳನ್ನು ತುಂಡರಿಸುವ ಮತ್ತೊಂದು ಪ್ರಯತ್ನದ ಅಂತ್ಯ ಈ ರೀತಿಯಾಯಿತು. ಈ ದಿಕ್ಕಿನಲ್ಲಿನ ಈ ವಿವಿಧ ಪ್ರಯತ್ನಗಳು ಸಮುದಾಯದ ಹಿರಿಯರನ್ನು ಕೆರಳಿಸಿತು. ನಮ್ಮ ಸಮಾಜದಲ್ಲಿ ಆಗ ನನ್ನನ್ನು ಬಂಡಾಯಗಾರ ಎಂದು ಪರಿಗಣಿಸಲಾಗಿತ್ತು. ಆದರೂ, ಆರ್ಯ ಸಮಾಜದ ಪ್ರಭಾವವು ಇನ್ನೂ ಶಕ್ತಿಯುತವಾಗಿ ಬೆಳೆದು ಸುಧಾರಣೆಯ ನನ್ನ ಪ್ರಯತ್ನಗಳು ಇನ್ನೂ ಹೆಚ್ಚಾದವು. ಬಾಲ್ಯ ವಿವಾಹವನ್ನು ತಡೆಗಟ್ಟಲು 1929ರಲ್ಲಿ ತಂದ 'ಶಾರದಾ ಕಾಯಿದೆ' ಪ್ರಕಾರ 18 ವರ್ಷ ತುಂಬುವ

ಮೊದಲು ಮದುವೆ ಮಾಡುವುದಕ್ಕೆ ಅನುಮತಿ ಇಲ್ಲದೇ ಇದ್ದರೂ, ನನ್ನ ಅಣ್ಣಂದಿರಾದ ಬಾಲಕೃಷ್ಣ ಮತ್ತು ಬಾಬುಲಾಲ್‌ರವರಿಗೆ ಸುಮಾರು 15 ವರ್ಷಕ್ಕೆ ಮದುವೆ ಮಾಡಲಾಯಿತು. ನಂತರ ನನ್ನ ಸರದಿ. 18 ವರ್ಷ ತುಂಬುವ ಮೊದಲೇ ವಿವಾಹವಾಗುವುದನ್ನು ನಾನು ಬಲವಾಗಿ ವಿರೋಧಿಸಿದೆ. ಆದರೆ ಯಾರೂ ನನ್ನ ಮಾತನ್ನು ಕೇಳಲು ತಯಾರಿರಲಿಲ್ಲ. ಒಂದು ಸಂತೋಷದಾಯಕ ಘಟನೆ ನನ್ನನ್ನು ಕಾಪಾಡಿತು.

ಭಾರತದಿಂದ ಬಂದ ಒಬ್ಬ ಹೆಸರಾಂತ ಜ್ಯೋತಿಷಿಯು ನಮ್ಮ ಮನೆಯ ಸಮೀಪವಿದ್ದ 'ಆರ್ಯ ಭವನ'ದಲ್ಲಿ ತಂಗಿದ್ದರು. ನನ್ನ ಹಸ್ತರೇಖೆಗಳನ್ನು ನೋಡಿ, ನಾನು ಧೀರ್ಘಾವಧಿಯವರೆಗೆ ಬದುಕುತ್ತೇನಾದರೂ, 18 ತುಂಬಿದಾಗ ನನ್ನ ಜೀವಕ್ಕೆ ಗಂಡಾಂತರವಿದೆ ಎಂದು ಭವಿಷ್ಯ ನುಡಿದರು. ಇದನ್ನು ಕೇಳಿ ನನಗೆ ಸಂತೋಷವಾಯಿತು. ನನ್ನ ಕುಟುಂಬದವರನ್ನು ಸಂಧಿಸಲು ನಾನು ಅವರನ್ನು ನಮ್ಮ ಮನೆಗೆ ಕರೆದುಕೊಂಡು ಹೋದೆ. ನಮ್ಮ ಮನೆಯವರ ಭವಿಷ್ಯವನ್ನೂ ಸಹ ಅವರು ಹೇಳಿದರು ಮತ್ತು ನಾನು ಹದಿನೆಂಟನೇ ವಯಸ್ಸನ್ನು ಪೂರ್ಣಗೊಳಿಸುವುದು ಕಷ್ಟ ಎಂದು ನನ್ನ ಭವಿಷ್ಯವನ್ನೂ ಪುನರುಚ್ಚರಿಸಿದರು. 18 ವರ್ಷ ತುಂಬುವ ತನಕ ನಾನು ಬದುಕುವುದಿಲ್ಲ ಎಂದಾದರೆ, ಎಳೆ ವಯಸ್ಸಿನ ಅಮಾಯಕ ಹೆಣ್ಣುಮಗಳನ್ನು ವಿಧವೆ ಮಾಡುವುದು ಎಷ್ಟು ಸರಿ ಎಂದು ನಾನು ನನ್ನ ತಾಯಿಗೆ ಮನವರಿಕೆ ಮಾಡಿದೆ. ನನ್ನ ಕರುಣಾಮಯಿ ತಾಯಿಯು ಒಪ್ಪಿಕೊಂಡರು ಮತ್ತು ಆ ವಿನಾಶಕಾರಿ ವರ್ಷ ಕಳೆಯುವವರೆಗೆ ಮದುವೆ ಮಾಡುವುದಿಲ್ಲ ಎಂದು ಘೋಷಿಸಿದರು.

ಮಂಜುಗವಿದ ನೆನಪಿನಿಂದ ನನ್ನ ಇನ್ನೊಂದು ಪ್ರತಿರೋಧದ ಘಟನೆಯ ನೆನಪೂ ಬರುತ್ತದೆ. ನಾನು ಈಗಾಗಲೇ ಹೇಳಿದಂತೆ, ನನ್ನ ಇಬ್ಬರು ಅಣ್ಣಂದಿರಿಗೂ 15 ವರ್ಷಕ್ಕೇ ಮದುವೆ ಮಾಡಲಾಯಿತು. ನನಗೆ 15 ವರ್ಷವಾದಾಗ, ನನ್ನ ಕುಟುಂಬದ ಪೂಜಾರಿಯನ್ನು ನನ್ನ ಧರ್ಮ ಗುರುವಾಗಿ ಸ್ವೀಕರಿಸಲು ನನ್ನನ್ನು ಒತ್ತಾಯಿಸಲಾಯಿತು. ಮುಂಬರುವ ನನ್ನ ಮದುವೆಗೆ ಪೂರ್ವಭಾವಿ ತಯಾರಿಗೆ ಅತ್ಯಾವಶ್ಯಕ ಹೆಜ್ಜೆಯಾದ ಉಪಕರ್ಮವನ್ನು ಈ ಪೂಜಾರಿ ಮಾಡುತ್ತಿದ್ದರು. ಆದರೆ ಈ ಪೂಜಾರಿಯ ನೈತಿಕತೆಯು ಪ್ರಶ್ನಾರ್ಹವಾಗಿತ್ತು. ನೈತಿಕ ನೀಚತನ ಹೊಂದಿದ್ದ ವ್ಯಕ್ತಿಯನ್ನು ನನ್ನ ಧರ್ಮ ಗುರುವಾಗಿ ನಾನು ಒಪ್ಪಿಕೊಳ್ಳುವುದಿಲ್ಲ ಎಂದು ಬಲವಾಗಿ ವಿರೋಧಿಸಿದೆ. ನಂತರ, ನಮ್ಮ ಮನೆಯಲ್ಲಿ ನಮ್ಮ ಕುಟುಂಬದ ದೇವಸ್ಥಾನದಲ್ಲಿ ನಿತ್ಯಪೂಜೆ ಮಾಡುತ್ತಿದ್ದ ಪೂಜಾರಿಯನ್ನು ಒಪ್ಪಿಕೊಳ್ಳಲು ಸೂಚಿಸಲಾಯಿತು. ಇವರ ಬಗ್ಗೆಯೂ ಪ್ರಶ್ನಾರ್ಹ ನೈತಿಕ ನಡವಳಿಕೆಯ ಗುಸುಗುಸು ದೊಡ್ಡದಾಗುತ್ತಾ ಬಂತು. ನೈತಿಕತೆ ಇಲ್ಲದಿರುವ ಯಾವುದೇ ವ್ಯಕ್ತಿಯನ್ನು ನಾನು ನನ್ನ ಗುರುವಾಗಿ ಸ್ವೀಕರಿಸುವುದಿಲ್ಲ ಎಂದು ಪಟ್ಟುಬಿಡದೆ ತಿರಸ್ಕರಿಸಿದೆ

ಆದರೆ ಹೆಚ್ಚುತ್ತಿದ್ದ ಕುಟುಂಬದ ಒತ್ತಡವನ್ನು ಸರಿದೂಗಿಸಲು, ಒಳ್ಳೆಯ ನೈತಿಕ ನಡವಳಿಕೆ ಹೊಂದಿದ್ದ ಆರ್ಯ ಸಮಾಜದ ಪೂಜಾರಿ, ಪಂಡಿತ ಮಂಗಳದೇವ್‌ಜಿ ಶಾಸ್ತ್ರಿಯವರನ್ನು ನನಗೆ ಉಪಕರ್ಮ ಮಾಡಲು ಅನುಮತಿಸಬಹುದು ಮತ್ತು ನಾನು ಅವರನ್ನು ನನ್ನ ಗುರುವಾಗಿ ಒಪ್ಪಿಕೊಳ್ಳುತ್ತೇನೆ ಎಂದು ಸಲಹೆ ನೀಡಿದೆ. ಆದರೆ, ಸನಾತನ ದರ್ಮಕ್ಕೆ ಸೇರಿದ ಹಿಂದುಗಳು ಮತ್ತು ಆರ್ಯ ಸಮಾಜದವರ (ಹಿಂದು ಸುಧಾರಣಾ ಚಳುವಳಿಯವರ) ಮಧ್ಯದ ವ್ಯತ್ಯಾಸಗಳು ಆಳವಾಗಿದ್ದವು. ನನ್ನ ಸಲಹೆಯನ್ನು ಕುಟುಂಬದವರು ಸಾರಾಸಗಟಾಗಿ ತಿರಸ್ಕರಿಸಿದರು. ನನ್ನ ಜನಿವಾರದ ಮತಾಚರಣೆಯ ಸುತ್ತಲಿನ ವಾದ ವಿವಾದಗಳು ನಿಂತು ಹೋದವು. ನಾನು ಜನಿವಾರವಿಲ್ಲದೇ ಉಳಿದುಬಿಟ್ಟೆ. ಒಳ್ಳೆಯದೇ ಆಯಿತು.

ನನ್ನ ಹೃದಯದಲ್ಲಿ ಹೊತ್ತಿದ ಪ್ರತಿರೋಧದ ಜ್ವಾಲೆಯು ಬಹುಬೇಗ ದುಳ್ಳುರಿಯಾಗುತ್ತದೆ ಎಂಬ ಕಲ್ಪನೆ ಆಗ ನನಗಿರಲಿಲ್ಲ. ಆರ್ಯ ಸಮಾಜದ ಸುಧಾರಣಾ ತತ್ವವನ್ನು ನಾನು ಅನುಸರಿಸುತ್ತಿದ್ದೆ. ಆದರೆ ಗುಣವಿಶೇಷಣಗಳಿಂದ ಕೂಡಿದ ದೇವರುಗಳ ವಿಗ್ರಹಾರಾಧನೆಯಲ್ಲಿ ಮುಳುಗಿದ್ದುದರಿಂದ ಆರ್ಯ ಸಮಾಜದ ಅಮೂರ್ತ, ಆಕಾರವಿಲ್ಲದ ದೇವಾರಾಧನೆಯನ್ನು ನನ್ನ ಮನಸ್ಸು ಒಪ್ಪಿಕೊಳ್ಳಲಿಲ್ಲ. ಅಮೂರ್ತ ದೇವರನ್ನು ಪೂಜಿಸುವುದನ್ನು ಗ್ರಹಿಸಲು ನಿಜವಾಗಿಯೂ ನನಗೆ ಸಾಧ್ಯವಾಗಲಿಲ್ಲ. ನನ್ನ ಪ್ರೀತಿ ಪಾತ್ರ ಕೃಷ್ಣನ ಮೇಲಿನ ನನ್ನ ಭಕ್ತಿಯನ್ನು ನಿಲ್ಲಿಸಲಿಲ್ಲ. ಬೆಳಿಗ್ಗೆ ಭಕ್ತಿಗೀತೆ ಹಾಡುವ ಮತ್ತು ಪವಿತ್ರ ಭಗವದ್ಗೀತೆಯನ್ನು ಓದುವ ನನ್ನ ನಿತ್ಯಾಚರಣೆ ಮುಂದುವರಿಯಿತು. ಸಹೋದರರ ಮಧ್ಯದ ಭೀಕರ ಯುದ್ಧ, ತತ್ಫಲವಾಗಿ ಅನೇಕ ವೀರ ಯೋಧರ ಮರಣ ಮತ್ತು ಹೇಳಲಾಗದಂತಹ ವಿನಾಶದ ಬಗ್ಗೆ 'ಗೀತೆ'ಯಲ್ಲಿ ಓದುವಾಗ ಅದರಲ್ಲಿ ಯಾವುದೇ ಪವಿತ್ರತೆಯನ್ನು ಕಾಣಲು ನನಗೆ ಸಾಧ್ಯವಾಗಲಿಲ್ಲ. ಆದರೆ ಪ್ರತಿಕೂಲ ಪರಿಸ್ಥಿತಿಯಲ್ಲಿ, ವಾಸ್ತವವಾಗಿ ಎಲ್ಲಾ ಪರಿಸ್ಥಿತಿಗಳಲ್ಲೂ ನನ್ನ ಆರಾಧ್ಯ ದೈವದ ಸಮ ಚಿತ್ತತೆಯ ಮಾತುಗಳು ನನ್ನನ್ನು ಬಹಳವಾಗಿ ಆಕರ್ಷಿಸಿದವು. ಮತ್ತು ನನ್ನ ಜೀವನದಲ್ಲಿ ಸಮ ಚಿತ್ತತೆಯಿಂದಿರಲು ತೀರ್ಮಾನಿಸಿದೆ.

ವ್ಯಕ್ತಿಯ ಕೆಲಸ, ಯೋಗ್ಯತೆ, ಪ್ರವೃತ್ತಿ ಮತ್ತು ನಡವಳಿಕೆಯನ್ನಾಧರಿಸಿ ನಾಲ್ಕು ಶ್ರೇಣಿಯ ಸಾಮಾಜಿಕ ವ್ಯವಸ್ಥೆಯನ್ನು ಕೃಷ್ಣನೇ ಮಾಡಿದ ಎಂಬುದನ್ನೂ ಓದಿದೆ.

***ಚಾತುರ್ - ವರ್ಣ್ಯಂ ಮಯಾ ಸೃಷ್ಟಂ ಗುಣ-ಕರ್ಮ-ವಿಭಾಗಷಃ ತಸ್ಯ ಕರ್ತಾರಂ ಅಪಿ ಮಾಮ್ ವಿದ್ಧ್ಯಾಕರ್ತಾರಂ ಅವ್ಯಯಂ. (ಗೀತಾ 4/13)***

*ಜನರ ಗುಣಗಳು ಮತ್ತು ಚಟುವಟಿಕೆಗಳ ಪ್ರಕಾರ ನಾಲ್ಕು ರೀತಿಯ ವೃತ್ತಿಗಳನ್ನು ನಾನು ಸೃಷ್ಟಿಸಿದ್ದೇನೆ. ನಾನೇ ಈ ವ್ಯವಸ್ಥೆಯ ಸೃಷ್ಟಿಕರ್ತನಾದರೂ, ನನ್ನನ್ನು ಕರ್ತನಲ್ಲ ಮತ್ತು ನಿರಂತರ ಎಂದು ತಿಳಿಯಿರಿ.*

ಒಬ್ಬ ವ್ಯಕ್ತಿಯ ಒಲವು, ಕ್ರಿಯೆಗಳು ಮತ್ತು ಸ್ವಭಾವವನ್ನು ಆಧರಿಸಿದ ಈ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಮತ್ತು ಅದು ಹೇಗೆ ಹುಟ್ಟು ಆಧಾರಿತ ಗಟ್ಟಿ ಜಾತಿ ವ್ಯವಸ್ಥೆಯಾಗಿ ಮಾರ್ಪಟ್ಟಿತು ಎಂಬುದರ ಬಗ್ಗೆ ನಾನು ಅವಲೋಕಿಸಿದೆ. ತಮ್ಮ ಅತಿ ಸ್ವಾರ್ಥ ಅವಶ್ಯಕತೆಗಳಿಗೆ ಅನುಕೂಲವಾಗುವಂತೆ ಮತ್ತು ಅವರ ಮುಂದಿನ ಪೀಳಿಗೆಗಳನ್ನು ರಕ್ಷಿಸುವುದಕ್ಕಾಗಿ ಬರೆದ 'ಮನುಸ್ಮೃತಿ'ಯಂತಹ ಗ್ರಂಥಗಳನ್ನು ಆಧರಿಸಿ, ಒಂದು ಸರಿಯಾದ ಸಾಮಾಜಿಕ ವ್ಯವಸ್ಥೆಯನ್ನು ಕೆಲವರು ಪ್ರಸ್ತುತದ ಸ್ಥಿತಿಗೆ ಭ್ರಷ್ಟಗೊಳಿಸಿದರು.

ಕೆಳ ಜಾತಿಗಳ ಮತ್ತು ಅಸ್ಪೃಶ್ಯರ ಮೇಲೆ ಮೇಲ್ಜಾತಿಯವರು ಹೇರಿದ ಕ್ರೂರ ದಬ್ಬಾಳಿಕೆಯು, ನಾನು ಬರ್ಮಾದಲ್ಲಿದ್ದಾಗಲೂ, ನೋವಿನ ವಾಸ್ತವವಾಗಿತ್ತು. ಆದರೆ, ಭಾರತಕ್ಕೆ ಭೇಟಿಕೊಟ್ಟಾಗ ಅವರ ದಯನೀಯ ಸ್ಥಿತಿಯನ್ನು ಖುದ್ದು ನೋಡಿದಾಗ ನನ್ನ ದಂಗೆ ಏಳುವ ಮನಸ್ಸು ಚಿಂತಿಸಿತು: "ನನ್ನ ದೇವರು ಸೃಷ್ಟಿಸಿದ ಒಂದು ಸ್ವಸ್ಥ ವ್ಯವಸ್ಥೆಯು, ಶ್ರೇಷ್ಠರೆಂದು ಕರೆದುಕೊಳ್ಳುವವರ ದುರಹಂಕಾರದಿಂದ ಎಷ್ಟೊಂದು ಭ್ರಷ್ಟವಾಯಿತು? ಮತ್ತು ಭ್ರಷ್ಟವಾದ ಮೇಲೆ: "ಸರ್ವಶಕ್ತನಾದ, ಸರ್ವವ್ಯಾಪಿಯಾದ ಮತ್ತು ಯಾವಾಗಲೂ ಕರುಣಾಮಯಿಯಾದ ಅವನು ವ್ಯವಸ್ಥೆಯನ್ನು ಮೂಲ ರೂಪಕ್ಕೆ ಏಕೆ ತರಲಿಲ್ಲ? ಈ ಪುರಾತನ ವ್ಯವಸ್ಥೆಯನ್ನು ಹಾಳುಗೆಡವಿದವರಿಗೆ ಏಕೆ ಕಠಿಣ ಶಿಕ್ಷೆ ಕೊಡಲಿಲ್ಲ?".

ನನ್ನ ಚಿಕ್ಕ ವಯಸ್ಸಿನಿಂದಲೇ ಈ ಸಾಮಾಜಿಕ ವಿದ್ಯಮಾನದಿಂದಾಗಿ ದುಗುಡಗೊಂಡಿದ್ದೆ. ಕಸಗುಡಿಸುವವನ ಮಗನಾದ ಗುರುಚರಣ್ ಸಿಂಘ್ ಎಂಬ ಹುಡುಗ ನನ್ನ ತರಗತಿಯಲ್ಲಿದ್ದ. ಅವನು ನನ್ನ ಜೊತೆಯಲ್ಲೇ, ಒಂದೇ ಬೆಂಚಿನಲ್ಲಿ ಕೂರುತ್ತಿದ್ದೆವು. ಇದು ನನ್ನ ಇತರ ಸಹಪಾಠಿಗಳಿಗೆ ಸುತರಾಮ್ ಒಪ್ಪಿಗೆಯಾಗುತ್ತಿರಲಿಲ್ಲ. ಊಟದ ಸಮಯದಲ್ಲಿ ಮನೆಯಿಂದ ತಂದ ಊಟವನ್ನು ಇಬ್ಬರು ಅದೇ ಬೆಂಚಿನಲ್ಲಿ ಜೊತೆಗೆ ಕುಳಿತು ಊಟ ಮಡುತ್ತಿದ್ದೆವು. ಅವನ ಊಟದ ಡಬ್ಬಿಯಿಂದ ನಾನು ಊಟ ಮಾಡದಿದ್ದರೂ, ನನ್ನ ಸಹಪಾಠಿಗಳಿಗೆ ಇಷ್ಟವಾಗುತ್ತಿರಲಿಲ್ಲ. ಅವರು ನನ್ನನ್ನು ಖಂಡಿಸುತ್ತಿದ್ದರು ಮತ್ತು ಅದರ ಬಗ್ಗೆ ಮಾತಾಡಿಕೊಳ್ಳುತ್ತಿದ್ದರು.

ನನಗೆ ಸಂಬಂಧಿಸಿದಂತೆ, ಯಾವುದೇ ಒಂದು ಕುಟುಂಬದಲ್ಲಿ ಹುಟ್ಟಿದ ಮಾತ್ರಕ್ಕೆ ಅವನು ಎಷ್ಟೇ ಬುದ್ಧಿವಂತ ಮತ್ತು ಗುಣವಂತನಾದರೂ, ಅವನು ಹೇಗೆ ಅಸ್ಪೃಶ್ಯನಾಗುತ್ತಾನೆ? ಅದೇ ರೀತಿ, ಮೇಲ್ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ, ಅವನು ಗುಣವಂತನಲ್ಲದಿದ್ದರೂ, ಉತ್ತಮ ಕುಲದಲ್ಲಿ ಹುಟ್ಟಿದವನು ಎಂದು ಹೇಗೆ ಪರಿಗಣಿಸುತ್ತೀರಿ? ಖಂಡಿತವಾಗಿ, ನಾನು ದೊಡ್ಡವನಾದ ಮೇಲೂ ಇದನ್ನು ಅರ್ಥಮಾಡಿಕೊಳ್ಳಲು ವಿಫಲನಾದೆ. ಇದರ ಬಗ್ಗೆ ನಾನು ಏನನ್ನೂ ಮಾಡಲು ಸಾಧ್ಯವಿಲ್ಲದಿದ್ದರೂ ಈ ಕಹಿ ಸತ್ಯವು ಕೊನೆಯಿಲ್ಲದ ನೋವು ಕೊಡುತ್ತಾ ನನ್ನನ್ನು ಪದೇ ಪದೇ ಬಾಧಿಸುತ್ತಿತ್ತು.

ನಾನು ಹಿರಿಯರ ಜೊತೆ ರೈಲಿನಲ್ಲಿ ಪ್ರಯಾಣಿಸಿದಾಗ, ಊಟದ ಸಮಯದಲ್ಲಿ ಊಟ ಮಾಡಲು ಮನೆಯಿಂದ ತಂದ ಊಟದ ಡಬ್ಬಿಗಳನ್ನು ತೆರೆದಾಗ, ನಮ್ಮ ಬೆಂಚಿನಲ್ಲಿ ಕುಳಿತ ಬರ್ಮಾದ ಸಹ ಪ್ರಯಾಣಿಕರನ್ನು ಬೇರೆ ಕಡೆ ಹೋಗಲು ಕೇಳುತ್ತಿದ್ದೆವು. ಶಾಲೆಯಲ್ಲಿ ಕೆಳಜಾತಿಯ ಹುಡುಗನ ಜೊತೆ ಕುಳಿತು ಊಟ ಮಾಡುವಾಗಾಗಲಿ, ಅಥವಾ ನನ್ನ ಹಿರಿಯರ ಜೊತೆ ರೈಲಿನಲ್ಲಿ ಪ್ರಯಾಣಿಸುವಾಗ ಊಟದ ಸಮಯದಲ್ಲಿ ಬರ್ಮಾ ದೇಶೀಯ ಸಜ್ಜನನ್ನು, ಅವನು ಬರ್ಮೀಯ ಎಂಬ ಕಾರಣಕ್ಕೆ ಕೀಳು ಜಾತಿಯವನು ಎಂದು ಪರಿಗಣಿಸಿ, ಬೇರೆ ಕಡೆ ಹೋಗುವಂತೆ ಕೋರುತ್ತಿದ್ದದ್ದು ನೋವುಂಟು ಮಾಡುತ್ತಿತ್ತು.

ಭಾರತದ ರಾಜಸ್ಥಾನದ ಚುರು ವಿನಲ್ಲಿ ವಾಸಿಸುತ್ತಿದ್ದಾಗ ಇದರ ಅತಿರೇಕದ ರೂಪವನ್ನೂ ಕಂಡಿದ್ದೆ. ನನ್ನ ಪ್ರೀತಿಯ ಕೃಷ್ಣ ಪರಮಾತ್ಮನಿಗೆ ಅತ್ಯಂತ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದೆನಾದರೂ, ಕೆಲವು ವೇಳೆ ಅವನ ವಿರುದ್ಧವೂ ಪ್ರತಿಭಟಿಸುತ್ತಿದ್ದೆ. ಇಂತಹ ಸುಂದರ ಜಗತ್ತನ್ನು ಸೃಷ್ಟಿಸಿದವನು ಏಕೆ ಸಾಮಾಜಿಕ ಭ್ರಷ್ಟತೆಯನ್ನು ತಡೆಯಲು ಕಠಿಣ ಕ್ರಮ ತೆಗೆದುಕೊಳ್ಳಲಿಲ್ಲ. ವ್ಯಾಪಾರಿ ಅಥವಾ ಬ್ರಾಹ್ಮಣ ವರ್ಗದಲ್ಲಿ ಹುಟ್ಟಿದ ನಾವು, ಹೇಗೆ ನಮ್ಮನ್ನು ನಾವು ಶ್ರೇಷ್ಠ ಎಂದು ಪರಿಗಣಿಸಿ ಕೆಳ ವರ್ಗಗಳಲ್ಲಿ ಹುಟ್ಟಿದವರನ್ನು ದಮನಿಸುತ್ತಿದ್ದೇವೆ? ಆಗಿನ ಕಾಲದಲ್ಲಿ ಬರೆದ ಒಂದು ದ್ವಿಪದಿ ನನಗೆ ಇನ್ನೂ ನೆನಪಿದೆ:

ಕೇವಲ ಬ್ರಾಹ್ಮಣ ಅಥವಾ ವ್ಯಾಪಾರಿ ವರ್ಗದಲ್ಲಿ ಹುಟ್ಟಿದ್ದೇವೆ ಎಂಬ ಕಾರಣಕ್ಕೆ ನಾವು ಉತ್ತಮರೇ? ನಾವು ಮೇಲ್ಜಾಯಲ್ಲಿ ಹುಟ್ಟಿದವರು, ನಾವು ಅತ್ಯುತ್ತಮರು, ಸಮಾಜದಲ್ಲಿ ನಮ್ಮ ಸ್ಥಾನವು ಖಂಡಿತವಾಗಿಯೂ ಉನ್ನತವಾದದ್ದು.

ನಾನು ಗೊಂದಲಗೊಂಡಿದ್ದೆ. ಕೃಷ್ಣನ ಮೇಲೆ ತೀವ್ರ ವಿರೋಧದ ಭಾವ ಮತ್ತು ಅಗಾಧವಾದ ಭಕ್ತಿ ಏಕಕಾಲದಲ್ಲಿ ಇದ್ದವು.

**ಭಕ್ತಿಯಿಂದ ಶರಣಾಗತಿ-ಪರಮ ಭಕ್ತಿ**

ಈಗಾಗಲೆ ಹೇಳಿದಂತೆ, ನನ್ನ ಪಾಲನೆ ಪೋಷಣೆ ಮಾಡಿದ ತಂದೆ ತಾಯಿಗಳು, ಭಾರತದ ಗೋರಖಪುರದ 'ಗೀತಾ ಪ್ರೆಸ್' ಪ್ರತಿಪಾದಿಸಿದ ಭಕ್ತಿ ಮಾರ್ಗಕ್ಕೆ ಸಮರ್ಪಿಸಿಕೊಂಡಿದ್ದರು.

ನನ್ನ ಜೀವನದ ಪ್ರಾರಂಭದಲ್ಲಿಯೇ ನಾನು ಮೋಹನ್ ಮಾಸ್ಟರ್ಜಿ (ಮದನ್ ಮೋಹನ್ ಶರ್ಮ) ಯಂತಹ ಆಚಾರ್ಯರ ಸಂಪರ್ಕಕ್ಕೆ ಬಂದೆ. ಇವರು ಒಬ್ಬ ಸೂಕ್ಷ್ಮ ಸಂವೇದನೆಯ ಭಕ್ತರಾಗಿದ್ದರು. 'ಗೀತಾ ಪ್ರೆಸ್' ಪ್ರಕಟಿಸಿದ ಪವಿತ್ರ ಸಾಹಿತ್ಯವನ್ನು ಯಾವುದೇ ಸ್ವಾರ್ಥವಿಲ್ಲದೆ ಮ್ಯಾನ್ಮಾರ್‌ನಲ್ಲಿ ಪ್ರೋತ್ಸಾಹಿಸಿದರು. ಭಾವತುಂಬಿ ಭಕ್ತಿಗೀತೆಗಳನ್ನು ಹಾಡುತ್ತಿದ್ದರೆ, ಅವರ ಕಣ್ಣುಗಳಿಂದ ನೀರು ಹರಿಯುತ್ತಿತ್ತು. ಅವರನ್ನು ಗಮನಿಸುತ್ತಾ ಮತ್ತು ನಾನೂ ಸೂಕ್ಷ್ಮ ಸಂವೇದನೆಯವನಾಗಿದ್ದರಿಂದ, ದೇವರಿಗೆ ಪ್ರಾರ್ಥನೆ ಮಾಡುವಾಗ ಮತ್ತು ಭಕ್ತಿಗೀತೆ ಹಾಡುವಾಗ ನನ್ನ ಕಣ್ಣಲ್ಲೂ ನೀರು ಬರುತ್ತಿತ್ತು. ನನಗೆ ಇನ್ನೂ ನೆನಪಿದೆ, ಏಳು ವರ್ಷದ ಬಾಲಕನಾಗಿದ್ದಾಗ, 'ಭಕ್ತ ಶಿಶು', ಅಥವಾ 'ಭಕ್ತ ಮಹಿಳೆ' ತರಹದ 'ಗೀತಾ ಪ್ರೆಸ್'ನ ಪುಸ್ತಕಗಳನ್ನು ನನ್ನ ತಾಯಿಗೆ ಓದುತ್ತಿದ್ದೆ. ನನ್ನ ಕಣ್ಣಲ್ಲಿ ನೀರು ಬರುವುದನ್ನು ಕಂಡು ನನ್ನ ತಾಯಿಯು ಒದ್ದೆ ಕಣ್ಣುಗಳಿಂದ ನನ್ನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಬಿಗಿದಪ್ಪಿಕೊಳ್ಳುತ್ತಿದ್ದರು. "ಅಮ್ಮ ನಾನು ಧ್ರುವ ಆಗುತ್ತೇನೆ" (ಪುರಾಣ ಪ್ರಸಿದ್ಧ ಮಗುವಿನ ಪಾತ್ರ) ಎಂದು ನಾನು ಹೇಳುತ್ತಿದ್ದೆ. "ಹೌದು ಮಗನೇ, ನೀನು ಧ್ರುವ ಆಗುತ್ತೀಯ" ಎಂದು ಅವರು ಉತ್ತರಿಸುತ್ತಿದ್ದರು. ಇಂತಹ ಅನಾರೋಗ್ಯಕರವಾದ ಭಕ್ತಿಯ ವಾತಾವರಣದಲ್ಲಿ ನಾನು ಬಹಳ ವರ್ಷಗಳ ಕಾಲ ಬದುಕಿದೆ.

ಶಿವ ಮತ್ತು ಕೃಷ್ಣ ಇಬ್ಬರೂ ನನ್ನ ಆರಾಧ್ಯ ದೇವರುಗಳಾಗಿದ್ದರು. ಏಕೆಂದರೆ, ನನ್ನ ತಂದೆಯು ಶಿವನ ಭಕ್ತರು ಮತ್ತು ನನ್ನ ತಾಯಿಯು ಕೃಷ್ಣನ ಭಕ್ತರು. ಆದರೆ ನನ್ನ ಪ್ರೀತಿಯ ಅಜ್ಜ ಬುದ್ಧರ ಬಗ್ಗೆ ಆಳವಾದ ಒಲವಿದ್ದವರು. ಮಾಂಡಲೆಯಲ್ಲಿದ್ದ ಸತ್ಯನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಹೋದರೂ ಅಥವಾ ಹೋಗದೇ ಇದ್ದರೂ, 'ಮಾಂಡಲೆ'ಯ ಹೊರವಲಯದ 'ಸಂಜು'ವಿನಲ್ಲಿದ್ದ ಪುರಾತನ ಮತ್ತು ಚಾರಿತ್ರಿಕ ಮಹಾಮುನಿ ಬುದ್ಧ ದೇವಸ್ಥಾನಕ್ಕೆ ಕನಿಷ್ಠ ವಾರಕ್ಕೆ ಒಂದು ದಿನವಾದರೂ ತಪ್ಪಿಸದೆ ಹೋಗುತ್ತಿದ್ದರು. ನಾನೂ ಅವರ ಜೊತೆ ಹೋಗುತ್ತಿದ್ದೆ. ಆ ಭವ್ಯ ದೇವಸ್ಥಾನದಲ್ಲಿದ್ದ ಧ್ಯಾನಾಸಕ್ತ ಬುದ್ಧರ ವಿಗ್ರಹವು ನನ್ನನ್ನು ಬಹಳ ಆಕರ್ಷಿಸಿತ್ತು. ಕಣ್ಣುಮಿಟುಕಿಸದೆ ನಾನು ಆ ವಿಗ್ರಹವನ್ನು ದಿಟ್ಟಿಸಿ ನೋಡುತ್ತಿದ್ದೆ.

ಅದರ ವಿಶಾಲವಾದ ಪ್ರಾಂಗಣ ಭಕ್ತರಿಂದ ತುಂಬಿದ್ದರೂ, ಯಾವಾಗಲೂ ಸ್ವಚ್ಛವಾಗಿ ಮತ್ತು ಬಹಳ ನಿಶ್ಶಬ್ದವಾಗಿರುತ್ತಿತ್ತು. ಇದು ಅದ್ಭುತವಾಗಿ ನನ್ನನ್ನು ಆಕರ್ಷಿಸಿತು. ಈ ಪ್ರಶಾಂತ ಸ್ಥಳದಲ್ಲಿ ಬಾಬಾರವರು ಬಹಳ ಹೊತ್ತು ಕಣ್ಣು ಮುಚ್ಚಿ ಕುಳಿತಿರುತ್ತಿದ್ದರು. ಅವರು ಯಾವ ರೀತಿಯ ಧ್ಯಾನ ಮಾಡುತ್ತಿದ್ದರು, ಅಥವಾ ಮೌನ ಮತ್ತು ಏಕಾಂತದ ಆನಂದವನ್ನು ಅನುಭವಿಸುತ್ತಾ ಸುಮ್ಮನೆ ಕುಳಿತಿರುತ್ತಿದ್ದರೆ! ಅನೇಕ ಬಾರಿ ನಾನು ಆಶ್ಚರ್ಯಪಟ್ಟಿದ್ದೇನೆ. ಅವರನ್ನು ನೋಡಿ ನಾನು ಸಹ ಕಾಲು ಮಡಿಚಿ ಅವರ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದೆ. ಶಿವ ಮತ್ತು ಕೃಷ್ಣರ ಜೊತೆಗೆ ಬುದ್ಧರು ಸಹ ನನ್ನ ಪೂಜಿಸುವ ದೇವರಾದರು. ನಮ್ಮ ಮನೆಯಲ್ಲಿ ಹಾಕಿದ್ದ ಎರಡು ದೊಡ್ಡ ಫೋಟೋಗಳು ಶಿವ ಮತ್ತು ಕೃಷ್ಣರದಾಗಿದ್ದರೂ, ಮಹಾಮುನಿ ದೇವಸ್ಥಾನದ ನನ್ನ ನಿಯತವಾದ ಭೇಟಿಗಳು ಬುದ್ಧರ ಮೇಲಿನ ನನ್ನ ಭಕ್ತಿಯನ್ನು ಪೋಷಿಸಿದವು.

### ಮಹಾದೇವಜೀ ನಥಾನಿ

ನನ್ನ ಹಿರಿಯಕ್ಕನ ಗಂಡ, ಶ್ರೀ ಮಹಾದೇವಜೀ ನಥಾನಿಯವರು ನಮ್ಮ ಕಛೇರಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ನನಗಿಂತ 20 ವರ್ಷ ದೊಡ್ಡವರಾದ ಅವರು ಶಿಸ್ತಿನ ಧರ್ಮದ ಜೀವನ ನಡೆಸುತ್ತಿದ್ದರು. ಸಂಸ್ಕೃತ ಸಾಹಿತ್ಯದಲ್ಲಿ ಪಾಂಡಿತ್ಯಗಳಿಸಿದ್ದ, ಹೆಚ್ಚು ವ್ಯಾಸಂಗ ಮಾಡಿದ್ದ ಇವರನ್ನು ಜನರು ಗೌರವಿಸುತ್ತಿದ್ದರು. ಪವಿತ್ರ ಗ್ರಂಥಗಳ ಸೂಕ್ಷ್ಮ ವಿಚಾರಗಳ ಬಗ್ಗೆ ಸಂಸ್ಕೃತ ಪಂಡಿತರು ಅವರ ಜೊತೆ ದೀರ್ಘ ಚರ್ಚೆಯಲ್ಲಿ ತೊಡಗಿರುತ್ತಿದ್ದುದನ್ನು ನಾನು ಕೆಲವು ವೇಳೆ ನೋಡಿದ್ದೇನೆ.

ಮಗುವಾಗಿದ್ದಾಗಲೇ ನಾನು ವಿಷ್ಣುಸಹಸ್ರನಾಮ, ಗೋಪಾಲಸಹಸ್ರನಾಮ, ಶಿವ ಮಹಿಮ್ನಾಸ್ತೋತ್ರ, ಶಿವ ತಾಂಡವಸ್ತೋತ್ರ, ಶ್ರೀ ಮತ್ಭಾಗವತ್ ಮುಂತಾದ ಪವಿತ್ರ ಗ್ರಂಥಗಳ ಪಠಣ ಮಾಡುವುದನ್ನು ಕಲಿಯುತ್ತಿದ್ದೆ. ಸರಿಯಾಗಿ ಉಚ್ಚಾರ ಮಾಡುವುದನ್ನು ಅವರು ನನಗೆ ಹೇಳಿಕೊಡುತ್ತಿದ್ದರು. ಅವರ ಶಕ್ತಿಯುತವಾದ ಧ್ವನಿಯಲ್ಲಿ ಸಂಸ್ಕೃತ ಪಠಣ ಪ್ರತಿಧ್ವನಿಸುವುದನ್ನು, ವಿಶೇಷವಾಗಿ ರುದ್ರ ಶ್ಲೋಕವನ್ನು ಕೇಳಲು ನನಗೆ ಇಷ್ಟವಾಗುತ್ತಿತ್ತು. ಇಡೀ ವಾತಾವರಣವೇ ತಮಟೆ ಬಾರಿಸಿದಂತೆ ಪ್ರತಿಧ್ವನಿಸುತ್ತಿತ್ತು.

ಬಾಬಾರವರ ಜೊತೆ ನಾನು ಮಹಾಮುನಿ ದೇವಸ್ಥಾನಕ್ಕೆ ಹೋಗುವುದನ್ನು ಕಂಡು, "ಬುದ್ಧ ವಿಷ್ಣುವಿನ 9ನೇ ಅವತಾರ, ಅವನಿಗೆ ಗೌರವ ತೋರಿಸಬೇಕು, ಮಹಾಮುನಿ ದೇವಸ್ಥಾನಕ್ಕೆ ಪ್ರಾರ್ಥನೆ ಸಲ್ಲಿಸಲು ಹೋಗುವುದು ತಪ್ಪಲ್ಲ; ಆದರೆ ಅವನ ಬೋಧನೆಯನ್ನು ಅನುಸರಿಸಬಾರದು. ಏಕೆಂದರೆ ಅವು ಅನುಸರಿಸಲು ಯೋಗ್ಯವಲ್ಲ" ಎಂದು ಆಗಿಂದಾಗ್ಗೆ ಅವರು ವಿವರಿಸುತ್ತಿದ್ದರು. ವಿಷ್ಣು ಪರಮಾತ್ಮನು ಒಂದೇ ಒಂದು ಕಾರಣಕ್ಕೆ ಬುದ್ಧನ ಅವತಾರ ಎತ್ತಿದ. ದುಷ್ಟರನ್ನು, ಅಯೋಗ್ಯರನ್ನು ಗೊಂದಲಕ್ಕೀಡು ಮಾಡುವುದು. ಅವರು ಬುದ್ಧನ ದಾರಿತಪ್ಪಿಸುವ ಬೋಧನೆಗಳನ್ನು ಸ್ವೀಕರಿಸಿದ ಮೇಲೆ ಅವರನ್ನು ನರಕಕ್ಕೆ ಕಳುಹಿಸುವುದು. ಆದ್ದರಿಂದ, ಸತ್ತಮೇಲೆ ಅವರು ಸ್ವರ್ಗಕ್ಕೆ ಹೋಗಲು ಸಾಧ್ಯವಾಗುವುದಿಲ್ಲ" ಎಂದು ಮುಂದುವರಿದು ವಿವರಿಸಿದರು. ಅವರ ಅಭಿಪ್ರಾಯಗಳನ್ನು ರುಜುವಾತುಪಡಿಸಲು ಅವರು ಪವಿತ್ರ ಗ್ರಂಥದ ಕೆಲವು ಸಾಲಗಳನ್ನು ಓದುತ್ತಿದ್ದರು. ಈಗ ನನಗೆ ಅನಿಸುತ್ತದೆ, ಅದು ವಿಷ್ಣು ಪುರಾಣ ಇರಬೇಕು. ಈ ಸಂಭಾಷಣೆಯು ನನಗೆ ಅರ್ಥಹೀನವಾಗಿತ್ತು. ಒಬ್ಬ ದೇವರು ಜನರನ್ನು ತಪ್ಪು ದಾರಿಗೆಳೆಯುವುದಕ್ಕಾಗಿಯೇ ಏಕೆ ಅವತಾರ ಎತ್ತಬೇಕು? ಎಂಬುದನ್ನು ಅರ್ಥಮಾಡಿಕೊಳ್ಳದಷ್ಟು ಚಿಕ್ಕವನಾಗಿದ್ದೆ ನಾನು. ಆದರೆ ನಾನು ಅವರನ್ನು ಗೌರವಿಸುತ್ತಿದ್ದುದರಿಂದ, "ಬುದ್ಧನನ್ನು ಗೌರವಿಸಬೇಕು ಆದರೆ ಅವನ ಬೋಧನೆಗಳನ್ನು ಅನುಸರಿಸಬಾರದು" ಎಂಬ ಅವರ ಮಾತುಗಳು ನನ್ನ ಹೃದಯಕ್ಕೆ ಆಳವಾಗಿ ನಾಟಿದವು.

ಮುಂದುವರಿಯುವುದು............

### ಜೀವನದ ಕೊನೆಯವರೆಗೆ ಗೋಯಂಕಾಜಿಯವರ ದಣಿವರಿಯದ ಸೇವೆ

ರಾಮ್ ಪ್ರತಾಪ್ ಯಾದವ್‌ರವರು ಗೌರವಾನ್ವಿತ ಗೋಯಂಕಾಜಿಯವರ ಭಾರತದಲ್ಲಿನ ವಿಪಶ್ಯನ ಬೋಧನೆಯ ಪ್ರಾರಂಭದ ದಿನಗಳ ನೆನಪುಗಳನ್ನು (ಸೆಪ್ಟೆಂಬರ್ 2018ರ ವಿಪಶ್ಯನವಾರ್ತೆಯಲ್ಲಿ ಕೊಡಲಾಗಿದೆ). ಹಂಚಿಕೊಂಡಂತೆ ನಾನು ಅವರೊಂದಿಗಿನ ನನ್ನ ಕೊನೆಯ ವರ್ಷಗಳ ನೆನಪುಗಳನ್ನು ಹಂಚಿಕೊಳ್ಳುತ್ತೇನೆ.

1990 ರಿಂದ 2013ರವರೆಗೆ ಧರ್ಮ ಸಾಹಿತ್ಯದ ಸೃಷ್ಟಿ ಮತ್ತು ಸಂಗ್ರಹ ಕಾರ್ಯದಲ್ಲಿ ನಾನು ಗೋಯಂಕಾಜಿಯವರಿಗೆ ಸಹಾಯ ಮಾಡಿದೆ. ಅವರು ಬರ್ಮಾದಲ್ಲಿದ್ದಾಗಿನ ಅವರ ಪ್ರಾರಂಭದ ಲೇಖನಗಳು, ಅವರ ಪದ್ಯಗಳು, ಪತ್ರಗಳು ಮತ್ತು ಮ್ಯಾನ್ಮಾರ್ ಸಂಸ್ಕೃತಿಯ ಬಗೆಗಿನ ಲೇಖನಗಳು, ಮುಂತಾದವುಗಳನ್ನೂ ಇದು ಒಳಗೊಂಡಿತ್ತು. ಸಂಶೋಧನೆಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನೂ ನನಗೆ ವಹಿಸಲಾಗಿತ್ತು. ಹಿಂದಿಯಲ್ಲಿ ನೇರವಾಗಿ ಶೀಘ್ರಲಿಪಿಯಲ್ಲಿ ಬರೆಯುವ ಸಾಮರ್ಥ್ಯವು ನನಗಿದ್ದುದರಿಂದ, ಗೋಯಂಕಾಜಿಯವರ ಹತ್ತಿರ ಕುಳಿತು ಹೊಸ ಲೇಖನಗಳಿಗೆ ಅವರು ಹೇಳಿದ್ದನ್ನು ಬರೆದುಕೊಳ್ಳುವ ಸೌಭಾಗ್ಯವೂ ನನಗಿತ್ತು.

2011ರಲ್ಲಿ ಯಾದವ್‌ರವರು ಕಾಯಿಲೆ ಬಿದ್ದರು. ಅವರ ಅನುಪಸ್ಥಿತಿಯಲ್ಲಿ ಸಂಪಾದನ ಕೆಲಸ ಮಾಡಲು ನನ್ನನ್ನು ಗೋಯಂಕಾಜಿಯವರ ಮುಂಬಯಿ ನಿವಾಸಕ್ಕೆ ಕರೆಸಿಕೊಳ್ಳಲಾಯಿತು. ನಾನು ವಾರದ ಎಲ್ಲಾ ದಿನಗಳಲ್ಲೂ ಬೆಳಿಗ್ಗೆ 10 ರಿಂದ ಸಾಯಂಕಾಲ 5ರ ವರೆಗೆ ಕೆಲಸ ಮಾಡುತ್ತಿದ್ದುದರಿಂದ, ನಾನು ಮತ್ತು ನನ್ನ ಹೆಂಡತಿ ಆನಂದಿಯು ಒಟ್ಟಿಗೆ ವಾಸಿಸಲಿ ಎಂಬ ಉದ್ದೇಶದಿಂದ ಗೋಯಂಕಾಜಿಯವರ ಅಂಧೇರಿ ಮನೆಯ ಹತ್ತಿರವೇ ಚಿಕ್ಕ ಅಪಾರ್ಟ್‌ಮೆಂಟ್ ಪಡೆದುಕೊಳ್ಳಲು ಗೋಯಂಕಾಜಿಯವರೂ ಸಹಾಯ ಮಾಡಿದರು. ಈ ಸಮಯದಲ್ಲಿ 'ಕಾಫಿ ಟೇಬಲ್ ಪುಸ್ತಕ', ವಿಪಶ್ಯನ ಕೇಂದ್ರಗಳು' ಮತ್ತು 'ಮೇರಿ ಕವಿತಾ' (ನನ್ನ ಪದ್ಯಗಳು) ಎಂಬ ಗಣನೀಯವಾದ ಪುಸ್ತಕಗಳು ಪ್ರಕಟಗೊಂಡವು. ಜೊತೆಗೆ 'ಮಂಗಲ್ ಹುವಾ ಪ್ರಭಾತ್' (ಶುಭ ದಿನ ಉದಯವಾಗಿದೆ) ಎಂಬ ಸಂಕಲನಕ್ಕೆ ಸುಮಾರು ಒಂದು ಸಾವಿರ ಹೊಸ 'ದೋಹ'ಗಳನ್ನು ಸೇರಿಸಲಾಯಿತು. ಅವುಗಳ ಪ್ರಾಥಮಿಕ ರಚನೆ ಮತ್ತು ಸಂಕಲನದ ನಂತರ, ಆಯ್ಕೆಯನ್ನು ಅಂತಿಮಗೊಳಿಸಲು ಗೋಯಂಕಾಜಿಯವರು ಅವುಗಳನ್ನು ಅತ್ಯಂತ ಗಮನದಿಂದ ಅವಲೋಕಿಸುತ್ತಿದ್ದರು. ಈ ಕೃತಿಗಳ ಮೇಲೆ ಅವರು ಕೆಲಸ ಮಾಡುವುದನ್ನು ಗಮನಿಸುತ್ತಾ ಮತ್ತು ಅವರ ಅಸಾಧಾರಣವಾದ ಒಳನೋಟ ಮತ್ತು ಮಾರ್ಗದರ್ಶನದಿಂದ ಪ್ರಯೋಜನ ಪಡೆದೆ.

ಕ್ಷೀಣಿಸುತ್ತಿರುವ ಆರೋಗ್ಯದ ಕಾರಣದಿಂದ, ಗೋಯಂಕಾಜಿಯವರ ದಿನದ ಬಹು ಭಾಗವನ್ನು ಔಷಧೋಪಚಾರ ಮತ್ತು ಶಾರೀರಿಕ ಚಿಕಿತ್ಸೆಯೇ ನುಂಗಿ ಹಾಕುತ್ತಿತ್ತು. ಆದರೆ ಚಿಕಿತ್ಸೆಯ ನಂತರ ಉಳಿದ ಸಮಯದಲ್ಲಿ ಒಂದು ನಿಮಿಷವನ್ನೂ ಅವರು ಪೋಲು ಮಾಡುತ್ತಿರಲಿಲ್ಲ. ಧರ್ಮದ ಕೆಲಸದಲ್ಲಿ ಅವರು ಅವರ ಪ್ರತಿ ಕ್ಷಣವನ್ನೂ ಉಪಯೋಗಿಸುತ್ತಿದ್ದರು. ಮುಪ್ಪಿನ ಕಾಲದಲ್ಲಿ ಮತ್ತು ಗಂಭೀರ ದೈಹಿಕ ಕಾಯಿಲೆಗಳು ವ್ಯಕ್ತಿಯ ಮನಸ್ಸಿನ ಮೇಲೆ ಪರಿಣಾಮ ಬೀರುವುದನ್ನು ಕಂಡಿದ್ದೇವೆ. ಸುಸ್ತಾಗುವುದರಿಂದ ಮತ್ತು ನಿರಾಶೆಯಾಗುವುದರಿಂದ ಯಾವ ಕೆಲಸವನ್ನೂ ಮಾಡಬೇಕೆನಿಸುವುದಿಲ್ಲ. ಆದರೆ ಗೋಯಂಕಾಜಿಯವರು ಸಾಮಾನ್ಯ ಮನುಷ್ಯರಲ್ಲ. ಅವರು ಒಬ್ಬ ಅತ್ಯಂತ ಸಮರ್ಥ ಮತ್ತು ಸ್ಥಾಪಿತಗೊಂಡ ವಿಪಶ್ಯನ ಧ್ಯಾನ ಸಾಧಕರಷ್ಟೇ ಆಗಿರಲಿಲ್ಲ, ಈ ಅದ್ಭುತ ಮಾರ್ಗದ ಮಹಾನ್ ಬೋಧಕರಾಗಿದ್ದರು. ಅವರ ಕೊನೆಯ ದಿನಗಳಲ್ಲೂ, ಅವರಲ್ಲಿದ್ದ ಧರ್ಮದ ಶಕ್ತಿ ಎಲ್ಲೆ ಮೀರಿದ್ದು, ಅವರ ಸಾಮರ್ಥ್ಯವು ಸಹಜ ವ್ಯಕ್ತಿಯ ಸಾಮರ್ಥ್ಯವನ್ನು ಮೀರಿದ್ದು ಎಂಬುದರಲ್ಲಿ ಅನುಮಾನವಿಲ್ಲ. ತುಂಬಾ ಪ್ರಾಮಾಣಿಕವಾಗಿ ನಾನು ಹೇಳುತ್ತೇನೆ, ಗೋಯಂಕಾಜಿಯವರ ಮಾನಸಿಕ ಆರೋಗ್ಯ ಚೆನ್ನಾಗಿತ್ತು ಮತ್ತು ಅವರ ದೈಹಿಕ ಅನಾರೋಗ್ಯವು ಸ್ಪಷ್ಟ ತೀರ್ಮಾನ ತೆಗೆದುಕೊಳ್ಳುವ ಅವರ ಸಾಮರ್ಥ್ಯವನ್ನು ಕುಂದಿಸಿರಲಿಲ್ಲ. ಅವರ ದೈಹಿಕ ಶಕ್ತಿಯು, ಕೆಲವು ವೇಳೆ, ಅನಾರೋಗ್ಯದ ಕಾರಣದಿಂದ ಕುಂದುತ್ತಿತ್ತು. ಆದರೆ ಅವರ ಪರಿಶುದ್ಧ ಮನಸ್ಸು ಯಾವಾಗಲೂ ಸ್ಫುಟವಾಗಿ, ಒಳನೋಟಗಳಿಂದ ಕೂಡಿರುತ್ತಿತ್ತು.

ಗೋಯಂಕಾಜಿಯವರಿಗೆ ಸಹಾಕನಾಗುವ ಅವಕಾಶ ಸಿಕ್ಕಿದ್ದರಿಂದ ನಿಜವಾಗಿಯೂ ನಾನು ಅದೃಷ್ಟವಂತ. ಅವರ ಕೊನೆಯ ದಿನಗಳು ನನಗೆ ಅಪರಿಮಿತವಾದ ಪ್ರೇರಣೆ ನೀಡಿವೆ. ವಿಪಶ್ಯನದ ಶಕ್ತಿಯು, ಧಮ್ಮದ ಶಕ್ತಿಯು ಎಷ್ಟು ಅದ್ಭುತ ಎಂಬುದನ್ನು ಪ್ರತ್ಯಕ್ಷವಾಗಿ ನಾನು ನೋಡಿದೆ. ನಮ್ಮ ಆಚಾರ್ಯರು ಒಬ್ಬ ಮಹಾನ್ ವ್ಯಕ್ತಿ. ತನ್ನ ಎರಡನೆಯ ಅವಧಿಯ ಪ್ರಸಾರಕ್ಕಾಗಿ ನಮ್ಮ ಆಚಾರ್ಯರನ್ನು ಆಯ್ಕೆಮಾಡಿಕೊಂಡಿದೆ. ಅವರ ಕರುಣಾಮಯ ಮಾರ್ಗದರ್ಶನದಲ್ಲಿ ವಿಪಶ್ಯನ ಕಲಿತ ಮತ್ತು ಅವರ ಶಿಷ್ಯರಾದ ನಾವೆಲ್ಲಾ ನಿಜವಾಗಿಯೂ ಅದೃಷ್ಟವಂತರು ಎಂದು ನಾನು ಭಾವಿಸುತ್ತೇನೆ.

**RNI. No. : KARKAN/2015/68727. Postal Regn. No.: RNP/KA/BGS/2253/2017-19**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30.**

ವಿಶ್ವದ ಬಹುತೇಕ ಎಲ್ಲಾ ಪ್ರಮುಖ ದೇಶಗಳು ಇಂದು ವಿಪಶ್ಯನ ಧ್ಯಾನ ಕೇಂದ್ರಗಳನ್ನು ಹೊಂದಿವೆ. ಅವುಗಳಲ್ಲಿ ಪ್ರತಿಂಯೊಂದನ್ನೂ ಗೋಯಂಕಾಜಿಯವರ ಜಾಗರೂಕ ಮಾರ್ಗದರ್ಶನದಲ್ಲಿ ಸ್ಥಾಪಿಸಲಾಗಿದೆ. ಈ ಎಲ್ಲಾ ಕೇಂದ್ರಗಳಲ್ಲಿ, ವಿಶ್ವದಲ್ಲಿ ಅವು ಎಲ್ಲೇ ಇರಲಿ, ಗೋಯಂಕಾಜಿಯವರು ಹಾಕಿದ ಮಾರ್ಗದರ್ಶಿ ಸೂತ್ರಗಳ ಪ್ರಕಾರವೇ ವಿಪಶ್ಯನ ಶಿಬಿರಗಳನ್ನು ನಡೆಸಲಾಗುತ್ತದೆ. ಮಾರ್ಗದರ್ಶಿ ಸೂತ್ರಗಳು, ಸೂಚನೆಗಳು, ಶಿಸ್ತು, ನಿಯಮಗಳು, ಕಟ್ಟಳೆಗಳು ಮತ್ತು ವೇಳಾಪಟ್ಟಿಯು ಜಗತ್ತಿನಾದ್ಯಂತ ಇರುವ ಎಲ್ಲಾ ಕೇಂದ್ರಗಳಲ್ಲೂ ಒಂದೇ ಆಗಿವೆ. ವಿಪಶ್ಯನ ಧ್ಯಾನ ಕೇಂದ್ರಗಳನ್ನು ನಿರ್ವಹಿಸಲು ಸಹಾಯಕ ಆಚಾರ್ಯರ ಮತ್ತು ಟ್ರಸ್ಟಿಗಳ ನೇಮಕಕ್ಕೆ ಒಂದು ವ್ಯವಸ್ಥೆ ಜಾರಿಯಲ್ಲಿದೆ. ಶತಮಾನಗಳ ಕಾಲ ಧರ್ಮವು ತನ್ನ ಪರಿಶುದ್ಧ ರೂಪದಲ್ಲಿಯೇ ಉಳಿಯಬೇಕು ಮತ್ತು ದು:ಖಿತ ಮಾನವ ಜನಾಂಗಕ್ಕೆ ತಲತಲಾಂತರದವರೆಗೆ ಇದರ ಪ್ರಯೋಜನ ಸಿಗಬೇಕು ಎಂಬ ಮುಖ್ಯ ಉದ್ದೇಶದಿಂದ ಗೋಯಂಕಾಜಿಯವರು ಇದನ್ನು ಮಾಡಿದರು.

ಗೋಯಂಕಾಜಿಯವರ ದೂರದೃಷ್ಟಿ ಮತ್ತು ಮರ್ಗದರ್ಶನದ ಮೂಲಕ ಅದು ಸಾಧ್ಯವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. "ಈ ಮೌಲ್ಯಯುತವಾದ ಬೋಧನೆಯು ಮುಂದಿನ 2,500 ವರ್ಷಗಳ ಕಾಲ ಉಳಿಯುವಂತೆ ನೋಡಿಕೊಳ್ಳುವ ಜವಾಬ್ದಾರಿಯು ನನ್ನದಾಗಿದೆ" ಎಂದು ಗೋಯಂಕಾಜಿಯವರು ಹೇಳುತ್ತಿದ್ದರು. ಇದನ್ನು ರಕ್ಷಿಸುವ ಜವಾಬ್ದಾರಿಯ ದೊಡ್ಡ ಭಾಗವು ಈಗ ನಮ್ಮ ಮೇಲೆ, ಅವರ ಸಹಾಯಕ ಆಚಾರ್ಯರುಗಳ ಮೇಲೆ ಇದೆ. ತಮ್ಮ ಪಾಲಿನ ಕರ್ತವ್ಯವನ್ನು ಗೋಯಂಕಾಜಿಯವರು ಶ್ರದ್ಧೆಯಿಂದ ಮಾಡಿದ್ದಾರೆ. ಈಗ ನಾವು ಇದನ್ನು ಜಾಗರೂಕತೆಯಿಂದ ಪೋಷಿಸಿ, ಮುಂದಿನ ಪೀಳಿಗೆಯವರಿಗೆ ನೀಡಬೇಕು. ನಮ್ಮ ದಿವಂಗತ ಪೂಜ್ಯ ಧಮ್ಮ ತಂದೆಯವರಿಗೆ ಗೌರವ ತೋರಿಸಲು ಇರುವುದು ಇದೊಂದೇ ದಾರಿ. ವಿನಮ್ರತೆಯಿಂದ,

ರಾಮೇಶ್ವರಲಾಲ್ ಶರ್ಮ,
ಗೋಯಂಕಾಜಿಯವರ ಧಮ್ಮ ಸಹಾಯಕ.

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು:** 2020: ಜನವರಿ 1–12, 16–27, ಫೆಬ್ರವರಿ 5–16, 17 1 ಮಾರ್ಚ್, 4–15. ಏಪ್ರಿಲ್ 8–19, 22–3 ಮೇ 20–31. ಜೂನ್ 3–14, 17–28. ಜುಲೈ 1–12, 15–26, 29–9 ಆಗಸ್ಟ್. ಸೆಪ್ಟಂಬರ್ 2–13, 18–29. ಅಕ್ಟೋಬರ್ 7–18, 21–1 ನವೆಂಬರ್. ಡಿಸೆಂಬರ್ 11–22. **ಸತಿಪಟ್ಠಾನ ಶಿಬಿರಗಳು:** ಮಾರ್ಚ್ 28–5 ಏಪ್ರಿಲ್, ಆಗಸ್ಟ್ 12–20, ನವೆಂಬರ್ 4–12,. **3ದಿನದ ಶಿಬಿರಗಳು: ಜನವರಿ 30 – 2 ಫೆಬ್ರವರಿ, ಮಾರ್ಚ್ 19–22, ಆಗಸ್ಟ್ 27–30. ಒಂದು ದಿನದ ಶಿಬಿರ:** ಪ್ರತಿ ಭಾನುವಾರ ಬೆಳಿಗ್ಗೆ 11ರಿಂದ ಸಾಯಂಕಾಲ 4 ಗಂಟೆ. **ಮಕ್ಕಳ ಶಿಬಿರ:** ಪ್ರತಿ ತಿಂಗಳು ಯಾವುದಾದರೂ ಒಂದು ಭಾನುವಾರ. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ಮೊಬೈಲ್: 7829912733, 8861644284, 9972588377,
ಇ–ಮೇಲ್:info@paphulla.dhamma.org;website: www.dhamma.org.
**7406934095**

**10 ದಿನದ ಶಿಬಿರ ಆಯೋಜಿಸುವವರು ಮತ್ತು ಮಕ್ಕಳಿಗೆ 70ನಿಮಿಷದ ಆನಾಪಾನಾ ಧ್ಯಾನ ಶಿಬಿರ ವ್ಯವಸ್ಥೆ ಮಾಡುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

## ವಿಪಶ್ಯನ ಧ್ಯಾನ ಕೇಂದ್ರ, ದಾವಣಗೆರೆ

**10 ದಿನದ ಶಿಬಿರಗಳು :** 2020 ಜನವರಿ 1 ರಿಂದ 12, ಜನವರಿ 29–ಫೆಬ್ರವರಿ9, ಮಾರ್ಚ್ 4–14, ಏಪ್ರಿಲ್ 1–12. **3ದಿನದ ಶಿಬಿರ:** ಡಿಸೆಂಬರ್ 26–29. ಪ್ರತಿ ತಿಂಗಳು ಒಂದು ಶಿಬಿರ ನಡೆಸಲಾಗುವುದು. ಮಾಹಿತಿಗಾಗಿ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ. **ಆನ್‌ಲೈನ್ ರಿಜಿಸ್ಟ್ರೇಷನ್:**[illegible]
**ಒಂದು ದಿನದ ಶಿಬಿರ :** ಪ್ರತಿ ಭಾನುವಾರ ಬೆಳಿಗ್ಗೆ 10 ರಿಂದ 1.30 ರವರೆಗೆ. (ಹತ್ತು ದಿನದ ಶಿಬಿರ ನಡೆಯುವಾಗ ಬಿಟ್ಟು) **ವಿಳಾಸ :** ವಿಪಶ್ಯನ ಧ್ಯಾನ ಮತ್ತು ಸಂಶೋಧನಾ ಕೇಂದ್ರ, ಬೆಳಕು ಸಂಸ್ಥೆ ಆವರಣ, ಆಂಜನೇಯ ಮಿಲ್ ಹತ್ತಿರ, ದಾವಣಗೆರೆ ವಿಶ್ವವಿದ್ಯಾನಿಲಯ ರಸ್ತೆ, ದಾವಣಗೆರೆ. ನಗರ ಸಾರಿಗೆ ಬಸ್ ಸಂಖ್ಯೆ 101 (ವಿದ್ಯಾನಗರದಿಂದ ದಾವಣಗೆರೆ ವಿಶ್ವವಿದ್ಯಾನಿಲಯ). ಆಂಜನೇಯ ಮಿಲ್ ನಿಲ್ದಾಣದಲ್ಲಿ ಇಳಿದು ಬಸ್ ಹೋದ ದಾರಿಯಲ್ಲಿ ಸ್ವಲ್ಪ ಮುಂದೆ ಸಾಗಿದರೆ, ವಿಪಶ್ಯನ ಧ್ಯಾನ ಕೇಂದ್ರದ ಬೋರ್ಡ್ ಕಾಣಿಸುತ್ತದೆ. ಅಲ್ಲಿಂದ ಒಂದು ಕಿ.ಮೀ. ದೂರವಿದೆ. ಬೆಂಗಳೂರಿನಿಂದ ಬಸ್‌ನಲ್ಲಿ ಪ್ರಯಾಣಿಸುವವರು ಬಾಡಾ ಕ್ರಾಸ್‌ನಲ್ಲಿ ಇಳಿದು ನಗರ ಸಾರಿಗೆ ಬಸ್ ಹತ್ತಿ ಆಂಜನೇಯ ಮಿಲ್ ಹತ್ತಿರ ಇಳಿದು ಹೋಗಬಹುದು. ಬಾಡಾ ಕ್ರಾಸ್‌ನಿಂದ 2ಕಿ.ಮೀ ದೂರವಿದೆ. **ಸಂಪರ್ಕ ಸಂಖ್ಯೆಗಳು** : 9448588789, 9844245111, 9986962762, 8618103741, 9008733008, 8762086089.**ಧಮ್ಮ ಸುಖಾಲಯ**

### ವಿಪಶ್ಯನ ಅಂತರರಾಷ್ಟ್ರೀಯ ಧ್ಯಾನ ಕೇಂದ್ರ ಅರೇಹಳ್ಳಿ, ಬೆಂಗಳೂರು.

ಒಂದು ದಿನದ ಧ್ಯಾನಶಿಬಿರ ಪ್ರತಿ ಭಾನುವಾರ ಬೆಳಗ್ಗೆ 10 ರಿಂದ ಸಾಯಂಕಾಲ 4ರ ವರೆಗೆ ಮಕ್ಕಳ ಶಿಬಿರ ಪ್ರತಿ ತಿಂಗಳು ಎರಡನೇ ಶನಿವಾರ ಬೆಳಿಗ್ಗೆ 9.30 ರಿಂದ 3.30ರ ವರೆಗೆ. ನೋಂದಣಿಗೆ : https://www.dhamma.org/en/schedules/schsukhalaya **emil:** registration @ sukhalaya.dhamma.org. ಸಂಪರ್ಕಿಸಿ : 9880688995, 9591722008, 8989866927, 8762086089.

### ಧಮ್ಮ ವನ ವಿಪಶ್ಯನ ಅಂತರರಾಷ್ಟ್ರೀಯ ಧ್ಯಾನ ಕೇಂದ್ರ

ನಾಡಪ್ಪನ ಹಳ್ಳಿ, ಕೆ.ಆರ್. ನಗರ, (ತಾ),ಮೈಸೂರು ಜಿಲ್ಲೆ. ಪ್ರತಿ ತಿಂಗಳು 2 ನೇ ಮತ್ತು 4ನೇ ಗುರುವಾರ 3 ದಿನದ ಶಿಬಿರ ಪ್ರಾರಂಭವಾಗಿ ಭಾನುವಾರ ಸಾಯಂಕಾಲ ಕೊನೆಗೊಳ್ಳುತ್ತದೆ. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗಾಗಿ : https://www.dhamma.org/en/schedules/schvana. ಸಂಪರ್ಕಕ್ಕೆ: 8884566354,8880519658, 8088648226.

### ಧಮ್ಮ ನದಿ ವಿಪಶ್ಯನ ಧ್ಯಾನ ಕೇಂದ್ರ, ಉಡುಪಿ.

ಪ್ರತಿ ತಿಂಗಳು 2ನೇ ಮತ್ತು 4ನೇ ಭಾನುವಾರ ಒಂದು ದಿನದ ಶಿಬಿರ ಇರುತ್ತದೆ. ಸಮಯ ಬೆಳಿಗ್ಗೆ 10.30 ರಿಂದ ಸಾಯಂಕಾಲ 4.00ರ ವರಗೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9449773942, 8746908379, 782598326.

## ಇತರೆ ಸ್ಥಳಗಳಲ್ಲಿ ಒಂದು ದಿನದ ಶಿಬಿರಗಳು

**ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 7829912733, 9060300558, 9980105309. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ಭಾನುವಾರ ಹತ್ತು ದಿನದ ಶಿಬಿರ ನಡೆಯುವಾಗ ಬಿಟ್ಟು. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506, **ಲೋಕಾಪುರ(ಬಾಗಲಕೋಟೆ):** ಮೊದಲ ಅಥವಾ ಎರಡನೇ ಭಾನುವಾರ ಸಂಪರ್ಕಿಸಿ: 9741275657. **ಶಿವಮೊಗ್ಗ, ಸಂಪರ್ಕಿಸಿ :** 8453845690, 9480086856, 9449623606.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ
**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

ತೆರೆದ–ಅಂಚೆ
**ಮುದ್ರಿತ ವಿಷಯ**

ಗೆ,

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.